ಧಾರವಾಡದ **ಶ್ರೀದೇವಿ ಕಳಸದ** ಸದ್ಯ ಬೆಂಗಳೂರಿನ ನಿವಾಸಿ. ಪತ್ರಕರ್ತೆ. ಸಾಹಿತ್ಯ ಹಾಗೂ ಸಂಗೀತದ ವಿದ್ಯಾರ್ಥಿನಿ. ಹಿಂದೂಸ್ಥಾನಿ ಸಂಗೀತ ಕಲಾವಿದೆ. 'ಹಾಡಾಗದ ಸಾಲುಗಳು' (ಕವಿತೆಗಳು), 'ಯಂಕ್ ಪೋಸ್ಟ್' (ಕಥಾಸಂಕಲನ), 'ಹಮ್ಮಾ ಹೂ' (ಕಾದಂಬರಿ) ಪ್ರಕಟಿತ ಕೃತಿಗಳು. ಪ್ರಸ್ತುತ 'ಕೊನರು' ಆನ್‌ಲೈನ್ ಪತ್ರಿಕೆ ನಡೆಸುತ್ತಿದ್ದಾರೆ.

ಚುಂಗನ್ನು ಸಡಿಲಿಸಿಕೊಂಡು ಪತ್ರಾವಳಿ ಹಚ್ಚುತ್ತ ಕುಳಿತಳು.

* * *

'ಯಾರದೂ? ನನ್ನ ಗೌನ್ ಬಿಡಾಕೂ, ಅಯ್ಯೋ ಟೇಜ್ ಮ್ಯಾಲ ನನ್ನ ಹೆಸರಾ ಕರೀತಾರೀಗ' ನಿಪ್ಪಾಣಿಯ ಬಾಘೂರ್ ಗಲ್ಲಿಯ ಲೋಖಂಡೆ ಚಾಳಿಗೆ ಆತು ಚವತಿಯ ಗಣಪ ಕುಳಿತಿದ್ದ. ಅವನ ಮುಂದೆ ತುಸು ಎತ್ತರದಲ್ಲಿ ರ್‍ಯಾಂಪ್ ವಾಕ್‌ಗೆಂದು ಸ್ಟೇಜ್ ಸಜ್ಜು ಮಾಡಲಾಗಿತ್ತು. ಸುಮಾರು ಹೊತ್ತಿನಿಂದ ಬ್ಯಾಕ್ ಸ್ಟೇಜಿನ ಹಲಗೆಗಳ ಸಂದಿಯಲ್ಲಿ ಗಂಡಸಿನ ಮುಂಗೈಯೊಂದು ತೂರಿ ಸಾರಿಕಾಳ ಗೌನ್ ತುದಿ ಹಿಡೆದೆಳೆಯಲು ಪ್ರಯತ್ನಿಸುತ್ತಿತ್ತು. ಆಕೆ ಎಷ್ಟು ಜಾಗ ಬದಲಾಯಿಸಿದರೂ ಅದು ಅವಳನ್ನೇ ಹಿಂಬಾಲಿಸುತ್ತಿತ್ತು. ಆಕೆಯ ಹೆಸರನ್ನು ಮೈಕಿನಲ್ಲಿ ಎರಡನೇ ಸಲ ಕೂಗುತ್ತಿದ್ದಂತೆ ಆ ಕೈಗೆ ಸೇಫ್ಟಿ ಪಿನ್ ಚುಚ್ಚಿದವಳೇ, ರ್‍ಯಾಂಪ್‌ನತ್ತ ಓಡಿದಳು.

ಇಪ್ಪತ್ತು ಸ್ಪರ್ಧಿಗಳ ಪೈಕಿ, 'ಮಿಸ್ ಲೋಖಂಡೆ' ಯಾರು ಎಂಬ ಕುತೂಹಲ ತುತ್ತತುದಿಗೆ ಏರುತ್ತಿದ್ದಂತೆ ಆಕೆಯ ಗಂಡ ಮಾಬಳೇಶ್ವರ ಸ್ಟೇಜ್‌ನ ಬಳಿ ಬಂದು ನಿಂತ. ಸಾರಿಕಾಳ ಮುಡಿಗೆ ಕಿರೀಟ ಏರುತ್ತಿದ್ದಂತೆ ತನ್ನ ತಲೆಯ ಮೇಲಿದ್ದ ಬಿಳೀಟೋಪಿಯನ್ನು ಮುದ್ದೆ ಮಾಡಿ ಕಿಸೆಗೆ ತುರುಕಿಕೊಂಡ. ಆಯೋಜಕರು ಬಹುಮಾನದ ಭಾಗವಾಗಿ ಸಾರಿಕಾಳ ಕೈಗೆ ಗ್ಯಾಸ್ ಸ್ಟೋ ಇಡುತ್ತಿದ್ದಂತೆ ಮಾಬಳೇಶ ಒಂದೊಂದೇ ಹೆಜ್ಜೆ ಹಿಂದೆ ಸರಿದು ಕತ್ತಲಲ್ಲೇ ಬೇವಿನ ಮರಕ್ಕಾತು ನಿಂತ. ಕಾರ್ಯಕ್ರಮ ಮುಗಿದಮೇಲೆ ಹುಡುಕಿಕೊಂಡು ಬಂದ ಸಾರಿಕಾ ಅವನನ್ನು ಅಪ್ಪಿಕೊಂಡು, 'ಮಾಬೂ ನಡೀ ನಮ್ಮನೀಗೆ ಹೋಗೂಣು', ಅವನೆದೆ ಕಲ್ಲಿನಂತಾಗಿತ್ತು. ಕೈಗಳು ಭೂಮುಖಿಯಾಗಿ ಮುಷ್ಟಿ ಕಟ್ಟಿದ್ದವು. ಅವಳಿಂದ ಕೊಸರಿಕೊಂಡು ಹೋಗುವಾಗ ಅವನ ಕೈಯಿಂದ ಚೀಟಿ ಮತ್ತದರ ನೆತ್ತಿಗೆ ಚುಚ್ಚಿದ ಸೇಫ್ಟಿ ಪಿನ್, ಬಾಯಿತೆರೆದುಕೊಂಡು ಬಿದ್ದಿತು. ಕಣ್ಣಾಲಿಗಳು ಒದ್ದೆಯಾಗುತ್ತಿದ್ದವು. ಒಮ್ಮೆ ಜೋರಾಗಿ ಉಸಿರೆಳೆದುಕೊಳ್ಳುತ್ತಿದ್ದಂತೆ ಅವು ಅಲ್ಲಿಯೇ ಇಂಗಿಕೊಂಡವು. ಚೀಟಿ ಮತ್ತು ಸೇಫ್ಟಿ ಪಿನ್ ಎತ್ತಿಕೊಂಡು ಬಸ್‌ಸ್ಟ್ಯಾಂಡಿನೆಡೆ ಧಾವಿಸಿದಳು.

ಬೆಳಗಾವಿಯ ಕೊನೇ ಬಸ್ ಅವಳಿಗಾಗಿಯೇ ಕಾಯ್ದಿತ್ತೇನೋ ಎಂಬಂತೆ ಒಂದೇಸಮ ಹಾರ್ನ್ ಹಾಕುತ್ತಿತ್ತು. ಕೊನೆಯ ಸೀಟಿನಲ್ಲಿ ಕಿಟಕಿಯ ಬಳಿ ಒಂದೇ ಒಂದು ಸೀಟು ಉಳಿದಿತ್ತು. ಕುಳಿತು ನೀರಿನ ಬಾಟಲಿಯನ್ನು ಬಾಯಿಗಿಟ್ಟುಕೊಂಡಳು, ಬಸ್ ಚಲಿಸಿತು. ಹೊಟ್ಟೆ ಚುರುಗುಟ್ಟದರೂ ಆಯೋಜಕರು ಕೊಟ್ಟಿದ್ದ ಸ್ವೀಟ್‌ಬಾಕ್ಸ್‌ನೆಡೆ ಗಮನವೇ ಹೋಗಲಿಲ್ಲ. ಥಣ್ಣನೆಯ ಗಾಳಿಗೆ ಜೋಂಪು ಹತ್ತಿ, ಎಚ್ಚರವಾದಾಗ ಬಸ್ಸು ಸಂಕೇಶ್ವರ ಬಸ್‌ಸ್ಟ್ಯಾಂಡಿನಲ್ಲಿತ್ತು. ಬ್ಯಾಗಿನೊಳಗಿಂದ ಆ ಚೀಟಿಯನ್ನು ಹೊರತೆಗೆದಳು. ಹ್ಯಾಲೋಜೆನ್ ಬಲ್ಬಿನಡಿ ಅದಕ್ಕೆ ಸಿಕ್ಕಿಸಿದ್ದ ಸೇಫ್ಟಿಪಿನ್ ಅನ್ನು ಬಳೆಗಳಿಗೆ ಹಾಕಿಕೊಂಡು, ಚೀಟಿ ಬಿಚ್ಚಿದಳು.

'ಡಿಯರ್ ಮಾಬೂ, ಬರೋಬರ್ ಒಂದ ವಾರ ವ್ಯಾಳ್ಯಾ ಕೊಡ್ತೀನಿ. ಮನೀಗೆ ಗ್ಯಾಸ್ ಒಲಿ ತಂದು, ನೀ ಅನ್ನಾ ಬ್ಯಾಳಿ ಇಡಾಕ ಕಲತಮ್ಯಾಲೇನ ನಾ ಹೊಳ್ಳಿ ಬರಾಕಿ.'

ಇಂತಿ ಸಾರೂ. ತಿಂಗಳ ಹಿಂದೆ ಗಂಡನಿಗೆ ತಾನೇ ಬರೆದ ಚೀಟಿ.

* * *

ಸುಲೂತಾಯಿ ಬೇಳೆ ಮಸೆಯುತ್ತಲೇ ಎಣ್ಣೆ ಕಾಯಿಸಲಿಟ್ಟು, ಅತ್ತ ಕರಿಬೇವು ಗೀರಿಕೊಂಡು, ಇತ್ತ ಬೆಳ್ಳುಳ್ಳಿ ಬಿಡಿಸಿಕೊಂಡು ಸಾರಿಗೆ ವಗ್ಗರಣೆ ಸಿಡಿಸಿ ಕುದಿಯಲು ಬಿಟ್ಟರೂ ಮಾಬೂ ಮಾತ್ರ ಗೋಣು ತಿರುವಿ ಗುರಿಯಿಟ್ಟು ಚುಮಣೀಎಣ್ಣೆ ಸ್ಟೋದ ಉರಿಯನ್ನು ನೋಡುತ್ತಿದ್ದ. ಉಕ್ಕುತ್ತಿದ್ದ ಸಾರಿಗೆ ಅಡ್ಡವಾಗಿ ಸವುಟನ್ನಿಟ್ಟು ಎದ್ದು ಬಂದು ಅವನ ಎದುರು ಕುಳಿತಳು. "ತಗೀ ಯಾಶೀಮಾರೀ, ನೀ ಏನ ದೊಡ್ಡ